No. of Printed Pages : **2**

# 21BA4L1LK4

**B.A./B.S.W./B.Sc./B.C.A./GMT/B.Com./B.B.A./B.H.M.**
**IV Semester Degree Examination, Sept./Oct. - 2024**

**ಸಾಮಾನ್ಯ ಕನ್ನಡ**

**ಕಲಾ ವಿಜಯ – 4**

**(NEP)**

Time : 2 Hours | Maximum Marks : 60

***ಸೂಚನೆ :*** *ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.*

**ವಿಭಾಗ – ಎ**

**1.** ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **10x1=10**

(a) ಜೇಡರ ದಾಸಿಮಯ್ಯನ ವಚನಾಂಕಿತವೇನು ?

(b) ಭಾರತೀಪ್ರಿಯ ಅವರು ಬರೆದ ಕತೆಯ ಹೆಸರೇನು ?

(c) ಕಾರ್ತಿಕ ಋಷಿಯ ತಂದೆಯ ಹೆಸರೇನು ?

(d) ಶ್ರೀಕೃಷ್ಣನ ಬಾಲ್ಯ ಸ್ನೇಹಿತನ ಹೆಸರೇನು ?

(e) 'ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು' ಎಂದು ಕವಿ ಕುವೆಂಪು ಅವರು ಯಾವ ದೇವಾಲಯವನ್ನು ಕುರಿತು ಹೇಳಿದ್ದಾರೆ ?

(f) ಡಿ.ವಿ.ಜಿ. ಅವರ ಪೂರ್ಣ ಹೆಸರೇನು ?

(g) ರೋಮಿಯೋ–ಜ್ಯೂಲಿಯೆಟ್ ನಾಟಕವನ್ನು ಬರೆದವರು ಯಾರು ?

(h) ಜ್ಯೂಲಿಯೆಟ್‌ನ ತಂದೆಯ ಹೆಸರನ್ನು ತಿಳಿಸಿರಿ.

(i) 'ರಂಜಾನ್ ಸಾಬ್' ಅವರು ಜನಿಸಿದ ಊರು ಯಾವುದು ?

(j) 'ಅಪ್ಪ' ಕವಿತೆಯನ್ನು ಬರೆದ ಕವಿಯ ಹೆಸರನ್ನು ಬರೆಯಿರಿ.

**ವಿಭಾಗ – ಬಿ**

ಕೆಳಗಿನವುಗಳಲ್ಲಿ **ಬೇಕಾದ ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. **4x5=20**

**2.** ಕಾಯಕದ ಕುರಿತು ವಚನಕಾರರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ತಿಳಿಸಿರಿ.

**3.** ಬಡತನವನ್ನು ಜನಪದರು ಎದುರಿಸಿದ ರೀತಿಯನ್ನು ಪಠ್ಯಕ್ಕಿರುವ ತ್ರಿಪದಿಗಳ ಹಿನ್ನೆಲೆಯಲ್ಲಿ ವಿವರಿಸಿರಿ.

**4.** ದ.ರಾ. ಬೇಂದ್ರೆಯವರು ಬರೆದ 'ಹಕ್ಕಿ ಹಾರುತ್ತಿದೆ ನೋಡಿದಿರಾ' ಕವಿತೆಯ ಆಶಯವನ್ನು ತಿಳಿಸಿರಿ.

5. ರೋಮಿಯೋ–ಜ್ಯೂಲಿಯೆಟ್ ನಾಟಕದಲ್ಲಿ ಬರುವ ನಿಮಗಿಷ್ಟವಾದ ಪಾತ್ರದ ಕುರಿತು ಬರೆಯಿರಿ.

6. ಕೃಷಿ ರಂಗದಲ್ಲಿ ಆಗಬೇಕಾದ ಸುಧಾರಣೆಗಳನ್ನು ಕುರಿತು 'ರೈತನಿಗೂ ನೀಡಿ ಘನತೆಯ ಬದುಕು' ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

7. 'ಟೆಲಿ ಮೆಡಿಸಿನ್' ಪದ್ಧತಿಯ ಅನುಕೂಲಗಳನ್ನು ತಿಳಿಸಿ.

## ವಿಭಾಗ – ಸಿ

ಕೆಳಗಿನವುಗಳಲ್ಲಿ **ಬೇಕಾದ ಮೂರಕ್ಕೆ** ವಿವರವಾಗಿ ಉತ್ತರಿಸಿ. **3x10=30**

8. 'ಮೋಚಿ' ಕಥೆಯಲ್ಲಿ ಬರುವ ರಾಚನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

9. ಕಾರ್ತೀಕ ಋಷಿ ಕತೆಯ ಆಶಯವನ್ನು ಕುರಿತು ವಿವರಿಸಿರಿ.

10. ಸೋಮನಾಥಪುರ ದೇವಾಲಯವನ್ನು ಕವಿ ಕುವೆಂಪು ಅವರು ವರ್ಣಿಸಿದ ಬಗೆಯನ್ನು ವಿವರಿಸಿರಿ.

11. ರೋಮಿಯೋ–ಜ್ಯೂಲಿಯೆಟ್ ಅವರ ಪ್ರೇಮದ ತೀವ್ರತೆಯನ್ನು ಷೇಕ್ಸ್‌ಪಿಯರ್ ಚಿತ್ರಿಸಿದ ಬಗೆಯನ್ನು ವಿವರಿಸಿರಿ.

12. ಕರ್ನಾಟಕದ ಏಕೀಕರಣಕ್ಕೆ ರಂಜಾನ್ ಸಾಭ್ ನೀಡಿದ ಕೊಡುಗೆ ಏನು ? ವಿವರಿಸಿರಿ.

- o O o -